# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 451 |
| ಮಾನ್ಯ ಸದಸ್ಯರ ಹೆಸರು | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 07.12.2023 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕದಲ್ಲಿ ಮಾರಾಟವಾಗುವ ಮದ್ಯದ ಬಾಟಲಿಗಳ ಮುಚ್ಚಳದ ಮೇಲೆ ಅಂಟಿಸುವ ಅಬಕಾರಿ ಭದ್ರತಾ ಚೀಟಿ (ಇ.ಎ.ಎಲ್) ವೆಚ್ಚವನ್ನು ಇಲಾಖೆಯು ಮದ್ಯ ತಯಾರಕರ ಬದಲಾಗಿ ಗ್ರಾಹಕರಿಗೆ ವೆಚ್ಚವನ್ನು ಭರಿಸುವಂತೆ ಆದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಆದೇಶ ಸಂಖ್ಯೆ: ಆಇ 21 ಇಎಫ್ಎಲ್ 2019, ದಿನಾಂಕ:28.03.2023ರಲ್ಲಿ ದಿನಾಂಕ: 01.07.2023 ರಿಂದ ಜಾರಿಗೆ ಬರುವಂತೆ ಮದ್ಯ / ವೈನ್ ಉತ್ಪನ್ನಗಳ ಎಂ.ಆರ್.ಪಿ.ಯನ್ನು ಲೆಕ್ಕ ಹಾಕುವಾಗ ಅಬಕಾರಿ ಭದ್ರತಾ ಚೀಟಿಗಳ ವೆಚ್ಚವನ್ನು ಘೋಷಿತ ಬೆಲೆಯಲ್ಲಿ ತೋರಿಸದೆ ಪ್ರತ್ಯೇಕ Component ಆಗಿ ತೋರಿಸಲು ಆದೇಶಿಸಲಾಗಿತ್ತು. |
| ಆ | ಮದ್ಯ ತಯಾರಕರಿಂದ ಭರಿಸಬೇಕಾಗಿರುವ ಈ ವೆಚ್ಚವನ್ನು ಗ್ರಾಹಕರಿಂದ ವಸೂಲಿ ಮಾಡುತ್ತಿರಲು ಕಾರಣಗಳೇನು; | ದಿ ಕರ್ನಾಟಕ ಬ್ರೀವರ್ಸ್ ಮತ್ತು ಡಿಸ್ಟಿಲರ್ಸ್ ಅಸೋಸಿಯೇಷನ್ ರವರ ಮನವಿಯ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ಆಇ 21 ಇಎಫ್ಎಲ್ 2019, ದಿನಾಂಕ:28.03.2023ರಲ್ಲಿ ದಿನಾಂಕ: 01.07.2023 ರಿಂದ ಜಾರಿಗೆ ಬರುವಂತೆ ಮದ್ಯ / ವೈನ್ ಉತ್ಪನ್ನಗಳ ಎಂ.ಆರ್.ಪಿ.ಯನ್ನು ಲೆಕ್ಕ ಹಾಕುವಾಗ ಅಬಕಾರಿ ಭದ್ರತಾ ಚೀಟಿಗಳ ವೆಚ್ಚವನ್ನು ಘೋಷಿತ ಬೆಲೆಯಲ್ಲಿ ತೋರಿಸದೆ ಪ್ರತ್ಯೇಕ Component ಆಗಿ ತೋರಿಸಲು ಆದೇಶಿಸಲಾಗಿತ್ತು.<br><br>ಸದರಿ ಆದೇಶವನ್ನು ಪುನರ್ ಪರಿಶೀಲಿಸುವುದು ಸೂಕ್ತವೆಂದು ಸರ್ಕಾರವು ನಿರ್ಣಯಿಸಿ, ಆದೇಶ ಸಂಖ್ಯೆ: ಆಇ 21 ಇಎಫ್ಎಲ್ 2019, |
| ಇ | ಈ ವೆಚ್ಚದ ಹೊಣೆಯನ್ನು ಗ್ರಾಹಕರ ಮೇಲೆ ಹಾಕುವುದರಿಂದ ಮದ್ಯ ತಯಾರಿಕಾ ಕಂಪನಿಗಳಿಗೆ ಲಾಭವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಈ | ಗ್ರಾಹಕರ ಮೇಲೆ ಹಾಕಿರುವ ಈ ವೆಚ್ಚದ ಹೊರೆಯನ್ನು ತೆಗೆದು ಹಾಕಲು ಸರ್ಕಾರ | |

| | | |
|---|---|---|
| | ಯಾವಾಗ ಕ್ರಮ ಕೈಗೊಳ್ಳುತ್ತದೆ? | ದಿನಾಂಕ:24.06.2023ರಲ್ಲಿ ದಿ:28.03.2023ರ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದಿರುತ್ತದೆ.<br><br>ಸರ್ಕಾರವು ದಿನಾಂಕ:28.03.2023ರ ಆದೇಶವನ್ನು ಹಿಂಪಡೆದಿರುವುದರಿಂದ, ಮದ್ಯ ತಯಾರಿಕಾ ಕಂಪನಿಗಳಿಗೆ ಯಾವುದೇ ಲಾಭವಾಗಿರುವುದಿಲ್ಲ. |

**ಆಇ 71 ಇಎಲ್‌ಕ್ಯೂ 2023**

(ಆರ್.ಬಿ.ತಿಮ್ಮಾಪುರ)

ಅಬಕಾರಿ ಸಚಿವರು